## ಮೊದಲು ಮಾತು

ಮಂಗಳೂರು ವಿಶ್ವವಿದ್ಯಾನಿಲಯದ ಪಿಎಚ್.ಡಿ. ಪದವಿಗಾಗಿ 'ಮುದ್ರಾಮಂಜೂಷ: ಒಂದು ಸಮಗ್ರ ಅಧ್ಯಯನ' ಎಂಬ ಈ ಮಹಾಪ್ರಬಂಧವನ್ನು ಒಪ್ಪಿಸುತ್ತಿದ್ದೇನೆ.

ನನ್ನ ಈ ಮಹಾಪ್ರಬಂಧದ ರಚನೆಗೆ ಭಾಷಾವಿಜ್ಞಾನಿಗಳೂ, ತುಳು ನಿಘಂಟು ಯೋಜನೆಯ ಪ್ರಧಾನ ಸಂಪಾದಕರೂ, ನನ್ನ ಸಂಶೋಧನ ಮಾರ್ಗದರ್ಶಕರೂ ಆಗಿರುವ ಡಾ: ಯು.ಪಿ. ಉಪಾಧ್ಯಾಯರವರು ತಮ್ಮ ನಿರಂತರ ಮಾರ್ಗದರ್ಶನ, ಪ್ರೋತ್ಸಾಹ, ಸಕಾಲಿಕ ಸಲಹೆಗಳು ಹಾಗೂ ಸ್ನೇಹಪೂರ್ಣ ಮಾತುಗಳಿಂದ ನನಗೆ ನೆರವು ನೀಡಿದ್ದಾರೆ. ಅವರಿಗೆ ನಾನು ಋಣಿಯಾಗಿದ್ದೇನೆ.

ನನ್ನಲ್ಲಿ ಸಾಹಿತ್ಯ ಸಂಶೋಧನ ವಿಷಯದಲ್ಲಿ ಆಸಕ್ತಿ ಹುಟ್ಟಿಸಿ, ಅಧ್ಯಯನಕ್ಕೆ ಈ ವಿಷಯವನ್ನು ಆಯ್ದುಕೊಳ್ಳುವಂತೆ ಸೂಚಿಸಿದವರು ಡಾ: ಶ್ರೀನಿವಾಸ ಹಾವನೂರರು. ಇದಕ್ಕೆ ಸಂಬಂಧಿಸಿದ ನನ್ನ ಪ್ರಾರಂಭಿಕ ಅಧ್ಯಯನದಲ್ಲಿ ನಾನು ಗಮನಿಸಬೇಕಾದ ಗ್ರಂಥಗಳನ್ನು, ಲೇಖನಗಳನ್ನು ಸೂಚಿಸಿದ್ದಲ್ಲದೆ ಅವರು ಮುದ್ರಾಮಂಜೂಷದ ಒಂದು ಹಸ್ತಪ್ರತಿಯನ್ನು ಒದಗಿಸಿಕೊಟ್ಟು ಉಪಕರಿಸಿದ್ದಾರೆ. ಇಂದಿಗೂ ಅವರು ತೋರಿಸುತ್ತಿರುವ ಅಧ್ಯಯನ ಸಂಬಂಧ ಕಾಳಜಿಯೇ ನನಗೆ ದಾರಿದೀಪವಾಗಿದೆ.

ಪ್ರೊ. ಕು.ಶಿ. ಹರಿದಾಸ ಭಟ್ಟರು ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ಮೂಲಕ ಈ ಸಂಶೋಧನೆ ನಡೆಸಲು ಅನುವು ಮಾಡಿಕೊಟ್ಟಿದ್ದಾರೆ. ಕೇಂದ್ರದ ಈಗಿನ ನಿರ್ದೇಶಕ ಪ್ರೊ. ಎಚ್. ಕೃಷ್ಣಭಟ್ಟರು ಪ್ರೋತ್ಸಾಹವನ್ನು ನೀಡಿ ನನ್ನ ಅಧ್ಯಯನದ ಪ್ರಗತಿಯನ್ನು ವಿಚಾರಿಸುತ್ತಾ ಬಂದಿದ್ದಾರೆ. ಅಂತೆಯೇ ಇಲ್ಲಿಯ ಡಾ: ಶ್ರೀಮತಿ ಸುಶೀಲಾ ಉಪಾಧ್ಯಾಯ, ಡಾ: ಕೆ. ಪದ್ಮನಾಭ ಕೇಕುಣ್ಣಾಯರು ಮುಂತಾದವರು ನನಗೆ ಸಕಾಲಿಕ ಸಲಹೆ ನೀಡಿ ಉಪಕರಿಸಿದ್ದಾರೆ.

ಮುದ್ರಾಮಂಜೂಷದ ಕರ್ತೃವಿನ ವಂಶಸ್ಥರು ಬೆಂಗಳೂರಿನಲ್ಲಿ ವಾಸ್ತವ್ಯ ಹೂಡಿರುವುದು ತಿಳಿದು, ಅಲ್ಲಿಗೆ ಹೋಗಿ ಭೇಟಿಯಾದಾಗ — ಶ್ರೀಮತಿ ಲಲಿತಮ್ಮನವರು ತುಂಬು ವಾತ್ಸಲ್ಯದಿಂದ ನೋಡಿಕೊಂಡಿದ್ದಾರೆ. ತಾವು ಹಿರಿಯರಿಂದ ಕೇಳಿ ತಿಳಿದಿದ್ದ ಸಂಗತಿಗಳನ್ನು ನೆನಪಿಸಿಕೊಂಡು ಹೇಳಿದ್ದಾರೆ. ನನ್ನ ಈ ಅಧ್ಯಯನದ ಬಗ್ಗೆ ಅಭಿಮಾನ ಪಟ್ಟಿದ್ದಾರೆ.

ಈ ಗ್ರಂಥದ ಹಸ್ತಪ್ರತಿಗಳನ್ನು ನೋಡಲು ಮೈಸೂರಿಗೆ ಹೋದ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥರು, ಅಲ್ಲಿಯ ಹಸ್ತಪ್ರತಿ ವಿಭಾಗದ ಅಧಿಕಾರಿಗಳು, ಸಹಾಯಕರು ಬಹಳ ತಾಳ್ಮೆಯಿಂದ ಹಸನ್ಮುಖಿಗಳಾಗಿ ಸಹಕರಿಸಿದ್ದಾರೆ.

......2.

ಈ ಕೃತಿಯನ್ನು ಸಂಪಾದಿಸಿ ಪ್ರಕಟಿಸಿದ್ದ ರೆ: ಫಾ: ಜೆ. ಸ್ಟೀವನ್ಸನ್ ಅವರ ಬಗ್ಗೆ, ಇದರ ಮುದ್ರಿತ ಪ್ರತಿಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಹೋದಾಗ ಬೆಂಗಳೂರಿನ ಯುನೈಟೆಡ್ ಥಿಯಾಲಜಿಕಲ್ ಕಾಲೇಜ (ಯು.ಟಿ.ಸಿ.) ನ ಫಾದರ್ ಎಂ.ಕೆ.ಕುರಿಯಾಕೋಸ್ ಮತ್ತು ಕುಮಾರಿ ಡೇವಿಡ್ ಅವರು ಅಲ್ಲಿಯ ಗ್ರಂಥಾಲಯದಲ್ಲಿ ನನಗೆ ಬೇಕಾಗಿದ್ದ ವಿಷಯಗಳನ್ನು ಸಂಗ್ರಹಿಸುವಲ್ಲಿ ನೆರವಿತ್ತಿದ್ದಾರೆ. ತುಮಕೂರಿನ ವೆಸ್ಲಿಯನ್ ಚರ್ಚಿಗೆ ಸಂಬಂಧಿಸಿದ ರೆ: ಎ. ತ್ಯಾಗರಾಜು ಅವರು, ಮಂಗಳೂರಿನ ಕರ್ನಾಟಕ ಥಿಯಾಲಜಿಕಲ್ ಕಾಲೇಜ (ಕೆ.ಟಿ.ಸಿ.) ನ ಪ್ರಿನ್ಸಿಪಾಲ್ ರೆ: ಫಾ: ಸಿ.ಎಲ್.ಫುರ್ತಾಡೋ ಮತ್ತು ಗ್ರಂಥಪಾಲ ರೆ. ನವೀನ ಅಲ್ಬರ್ಟ್ಸ ಇವರು ಮಾಹಿತಿ ಹಾಗೂ ಮುದ್ರಿತ ಪುಸ್ತಕಗಳನ್ನು ಒದಗಿಸಿ ಕೊಟ್ಟಿದ್ದಾರೆ.

ಸುಬ್ರಹ್ಮಣ್ಯ ಮಠದ ಶ್ರೀಶ್ರೀ ವಿದ್ಯಾಭೂಷಣ ತೀರ್ಥ ಶ್ರೀಪಾದಂಗಳವರು ನನ್ನ ಅಧ್ಯಯನಕ್ಕೆ ಅವಶ್ಯಕವಾದ ಅನೇಕ ಗ್ರಂಥಗಳನ್ನು ಒದಗಿಸಿದ್ದಲ್ಲದೇ, ಪ್ರೀತಿಪೂರ್ವಕವಾಗಿ ಹರಸಿದ್ದಾರೆ.

ಉಡುಪಿಯ ಶ್ರೀ ಎಂ. ರಾಜಗೋಪಾಲಾಚಾರ್ಯ, ಬನ್ನಂಜೆ ಗೋವಿಂದಾಚಾರ್ಯ, ಮೈಸೂರಿನ ಡಾ: ಟಿ.ವಿ. ವೆಂಕಟಾಚಲಶಾಸ್ತ್ರಿ, ಡಾ: ಕೆ.ಅನಂತರಾಮು, ಶ್ರೀ ಎಚ್.ಎಂ.ಶಂಕರನಾರಾಯಣ ರಾವ್, ಮಂಗಳೂರಿನ ಡಾ: ಕೆ.ಸುಬ್ರಹ್ಮಣ್ಯಭಟ್, ಶಿಲ್ಪಶಾಸ್ತ್ರವಿಶಾರದ ಮುನಿಯಂಗಳ ಕೃಷ್ಣಭಟ್ ಮೊದಲಾದ ವಿದ್ವಾಂಸರನ್ನು ಮುಖತ: ಭೇಟಿಯಾದಾಗ ಅವರು ನನಗೆ ಯುಕ್ತೋಚಿತವಾದ ಸಲಹೆ, ಸಹಕಾರವನ್ನು ನೀಡಿದ್ದಾರೆ. ಅದರಲ್ಲಿಯೂ ಶ್ರೀ ಎಂ.ರಾಜಗೋಪಾಲಾಚಾರ್ಯರು ಈ ಕೃತಿಯಲ್ಲಿಯ ಅಲಂಕಾರಗಳನ್ನು ಗುರುತಿಸಿ ಕೊಟ್ಟು ನೆರವಾಗಿದ್ದಾರೆ. ನನ್ನ ಪ್ರಿಯ ಸಹೋದ್ಯೋಗಿ ಬಂಧು ವಿದ್ವಾನ್ ಶ್ರೀ ಎಸ್.ಕೇಶವಭಟ್ಟರು ಸಮಯಾಸಮಯವೆನ್ನದೆ ಕೇಳಿದ ನನ್ನ ಪ್ರಶ್ನೆಗಳಿಗೆ, ಸಂದೇಹಗಳಿಗೆಲ್ಲ ಉತ್ತರಿಸಿ ಬರವಣಿಗೆಯಲ್ಲಿಯ ನನ್ನ ತಪ್ಪುಗಳನ್ನು ತಿದ್ದಿ ಮಹದುಪಕಾರ ಮಾಡಿದ್ದಾರೆ.

ಆಕರಗ್ರಂಥ, ಸಂದರ್ಭಗ್ರಂಥಗಳನ್ನು ಹುಡುಕಿಕೊಂಡು ಹೋದಾಗ ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯ, ಸಂಸ್ಕೃತ ಕಾಲೇಜಿನ ಗ್ರಂಥಾಲಯ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, (ಅರಮನೆ ಆವರಣ, ಮೈಸೂರು) ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ ಸಂಶೋಧನ ವಿಭಾಗ, ಮಿಥಿಕ್ ಸೊಸೈಟಿ, ಉಡುಪಿಯ ಗೋವಿಂದಪೈ ಸಂಶೋಧನ ಕೇಂದ್ರ, ಸುಬ್ರಹ್ಮಣ್ಯ ಮಠದ ಗ್ರಂಥಾಲಯ, ಸುಬ್ರಹ್ಮಣ್ಯದಲ್ಲಿಯ ಎರಡೂ ಕಾಲೇಜಿನ ಗ್ರಂಥಾಲಯಗಳು — ಹೀಗೆ ವಿವಿಧ ಗ್ರಂಥಾಲಯಗಳಿಂದ ನೆರವು ಪಡೆದಿದ್ದೇನೆ.

ಇಂತಹ ಸಂಶೋಧನ ಕಾರ್ಯ ನಡೆಸುವಾಗ ಮಾಹಿತಿ ಒದಗಿಸಬಹುದಾದ ಎಲ್ಲರನ್ನು ಮುಖತಃ ಭೇಟಿಯಾಗುವುದು ಕಷ್ಟಸಾಧ್ಯವಾದುದರಿಂದ ಅನೇಕ ವಿದ್ವಾಂಸರನ್ನು, ಗ್ರಂಥಾಲಯಗಳನ್ನು ಪತ್ರ ಮೂಲಕ ಸಂಪರ್ಕಿಸಬೇಕಾಯಿತು. ಆಗ ಅವರು ಸಕಾಲದಲ್ಲಿ ಉತ್ತರ ಬರೆದು ನನ್ನ ಅಧ್ಯಯನದ ಉತ್ಸಾಹವನ್ನು ಹೆಚ್ಚಿಸಿದ್ದಾರೆ. ಈ ರೀತಿಯಲ್ಲಿ ತಂಜಾವೂರಿನ ಮಹಾರಾಜಾ ಸರ್ಫೋಜಿ ಸರಸ್ವತಿ ಮಹಲ್ ಲೈಬ್ರರಿಯವರು, ರಾಜಸ್ಥಾನದ ಮಹಾರಾಜಾ ಗಂಗಾಸಂಘಜೀ ಟ್ರಸ್ಟ್, ಲಾಲ್‌ಘರ್ ಅರಮನೆ, ಬಿಕಾನೇರ ರಾಜಸ್ಥಾನ — ಇಲ್ಲಿಯ ಲೈಬ್ರರಿಯವರು, ರಾಜ್ಯಪತ್ರಾಗಾರ ಇಲಾಖೆಯ ಉಪನಿರ್ದೇಶಕರಾದ ಡಾ: ಶ್ರೀಮತಿ ಗಾಯತ್ರಿ ಜೆ.ಬಿ. ಯವರು, ಬೆಂಗಳೂರು ವಿಶ್ವವಿದ್ಯಾನಿಲಯದ ಡಾ: ಹಂ.ಪ. ನಾಗರಾಜಯ್ಯ, ಶ್ರೀ ಎಸ್. ಶಿವಣ್ಣನವರು, ಮಣಿಪಾಲದ ಡಾ: ನ.ಕೃ.ತಿಂಗಳಾಯ, ಡಾ:ವಿದ್ಯಾಸರಸ್ವತಿ, ಶತಾವಧಾನಿ ಆರ್ ಗಣೇಶ್, ಕೆದಿಯ ಗುಂಡಾ ಜೋಯಿಸ್, ಪಾಲ್ತಾಡಿ ರಾಮಕೃಷ್ಣಾಚಾರ್,ಬಿ.ಜನಾರ್ದನ ಭಟ್, ಡಾ:ಎಚ್.ಜಿ.ಶ್ರೀಧರ ಮೊದಲಾದವರು ಒದಗಿಸಿದ ಮಾಹಿತಿಗಳನ್ನು ಯಥಾ ಸಂದರ್ಭ ಉಪಯೋಗಿಸಿ ಕೊಂಡಿದ್ದೇನೆ. ವಿವಿಧ ವಿದ್ವಾಂಸರುಗಳು ಪ್ರಕಟಿಸಿದ ಗ್ರಂಥಗಳಿಂದ, ಲೇಖನಗಳಿಂದ ನೆರವು ಪಡೆದಿದ್ದೇನೆ.

ಇನ್ನು, ನಾನು ಅಧ್ಯಾಪಕನಾಗಿ ದುಡಿಯುತ್ತಿರುವ ಸಂಸ್ಥೆ, ಶ್ರೀ ಸುಬ್ರಹ್ಮಣ್ಯೇಶ್ವರ ಸಂಯುಕ್ತ ಪದವಿಪೂರ್ವ ಕಾಲೇಜು, ಸುಬ್ರಹ್ಮಣ್ಯ — ಇದರ ಆಡಳಿತ ವರ್ಗ, ಪ್ರಾಚಾರ್ಯ ಶ್ರೀ ಕೆ. ಸೋಣಪ್ಪಗೌಡ, ಹಿರಿಯ ಕಿರಿಯ ಸಹೋದ್ಯೋಗಿ ಬಂಧುಗಳು ಇವರೆಲ್ಲ ನನ್ನ ನಿರೀಕ್ಷೆಗೂ ಮೀರಿ ಪ್ರೋತ್ಸಾಹವನ್ನಿತ್ತಿದ್ದಾರೆ. ಗೆಳೆಯ ಶ್ರೀ ಸದಾಶಿವಭಟ್ ಇವರು ನನ್ನ ಕಿರುಕುಳಗಳನ್ನೆಲ್ಲ ಸಹಿಸಿ ಅಂದವಾಗಿ ಈ ಮಹಾಪ್ರಬಂಧದ ಬೆರಳಚ್ಚು ಪ್ರತಿಯನ್ನು ತಯಾರಿಸಿ ಕೊಟ್ಟಿದ್ದಾರೆ.

ಇಷ್ಟಿದ್ದೂ ನನ್ನ ಇತಿಮಿತಿಯ ಅರಿವು ನನಗಿದೆ ಎಂದು ನಮ್ರನಾಗಿ ನೆನಪಿಸಿಕೊಳ್ಳುತ್ತ, ಪ್ರತ್ಯಕ್ಷ ಪರೋಕ್ಷವಾಗಿ ಸಹಕರಿಸಿದವರಿಗೆಲ್ಲ ಕೃತಜ್ಞತೆಗಳನ್ನು ಸಮರ್ಪಿಸುತ್ತೇನೆ.

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ
ಎಂ.ಜಿ.ಎಂ. ಕಾಲೇಜ್, ಉಡುಪಿ.
ತಾ: 20.02.1995

(signature)
..............................
(ಶಂಕರನಾರಾಯಣ ಉಡುಪ)

# ಸಂಕ್ಷೇಪ ಸೂಚಿ

| | |
|---|---|
| ಎ.ಕ. | ಎಪಿಗ್ರಾಫಿಯಾ ಕರ್ನಾಟಕ |
| ಕ.ಇ.ದ. | ಕರ್ನಾಟಕ ಇತಿಹಾಸ ದರ್ಶನ |
| ಕ.ಕ.ಚ. | ಕರ್ನಾಟಕ ಕವಿ ಚರಿತೆ |
| ಕ.ಕಾ. ಐ.ವಿ. | ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು |
| ಕ.ಕಾ.ನ.ಚಿ. | ಕನ್ನಡ ಕಾವ್ಯಗಳಲ್ಲಿ ನಗರ ಚಿತ್ರಗಳು |
| ಕ.ಜ.ಜೀ. | ಕರ್ನಾಟಕ ಜನಜೀವನ |
| ಕ.ಶಾ.ಸಾಂ.ಅ. | ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ |
| ಕ.ಸ.ಪ. | ಕರ್ನಾಟಕದಲ್ಲಿ ಸತಿಪದ್ಧತಿ |
| ಕ.ಸಾ.ಪ. | ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ. |
| ನಾ.ಕ.ಕಾ. | ನಾಗವರ್ಮನ ಕರ್ನಾಟಕ ಕಾದಂಬರಿ |
| ಪು.ನಾ.ಚೂ. | ಪುರಾಣ ನಾಮ ಚೂಡಾಮಣಿ. |
| ಭಾ.ಕಾ.ಮೀ. | ಭಾರತೀಯ ಕಾವ್ಯ ಮೀಮಾಂಸೆ. |
| ಭಾ.ಸಾ.ಸ. | ಭಾರತೀಯ ಸಾಹಿತ್ಯ ಸಮೀಕ್ಷೆ. |
| ಶ್ರೀ. ಮ.ವಂ. | ಶ್ರೀಮನ್ಮಹಾರಾಜರವರ ವಂಶಾವಳಿ. |
| ಸ.ಕ.ಸಾ.ಚ. | ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ |